# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : 2021-22 ನೇ ಸಾಲಿನಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ ಅರಿವು ಸಾಲ ಯೋಜನೆಗಳನ್ನು ಅನುಷ್ಠಾನಗೊಳಸಲು ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ** 1.) ಸರ್ಕಾರದ ಆದೇಶ ಸಂಖ್ಯೆ:MWD 50 MDC 2021, ಬೆಂಗಳೂರು ದಿನಾಂಕ:27-07-2021

2)ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವರ ಏಕ ಕಡತ ಸಂಖ್ಯೆ: ಕಅಅನಿ/2021-22/882 ದಿನಾಂಕ:13-09-2021.

****

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ.(1) ರ ಸರ್ಕಾರದ ಆದೇಶದನ್ವಯ ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆಯ ಕಾರ್ಯಕ್ರಮಗಳನ್ನು 2021-22 ನೇ ಸಾಲಿಗೆ ಮುಂದುವರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ(2) ರಲ್ಲಿ 2021-22 ನೇ ಸಾಲಿನಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳನ್ನು ಮುಂದುವರಿಸಲಾಗಿದ್ದು, ಅದರಂತೆ, 2021-22 ನೇ ಸಾಲಿಗೆ ಆಯವ್ಯಯದಲ್ಲಿ ಅನುದಾನವನ್ನು ಕಡಿತಗೊಳಸಿ ನಿಗದಿಪಡಿಸಿರುವ ಈ ಕೆಳಕಂಡ ಅರಿವು ಯೋಜನೆಯಡಿ ಬೋಧನ ಶುಲ್ಕವನ್ನು ಮಂಜೂರಾತಿ ನೀಡುವಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: MWD 61 MDC 2021, ದಿನಾಂಕ:18-08-2021 ರಂದು ಹೊರಡಿಸಿದ್ದ ಆದೇಶವನ್ನು ಹಿಂಪಡೆಯುವಂತೆ ಕೋರಿರುತ್ತಾರೆ.

| ಕ್ರ.ಸಂ | ವಿದ್ಯಾಭ್ಯಾಸ/ಕೋರ್ಸಗಳು ಮತ್ತು ವಿವರಣೆ | ಈ ಹಿಂದೆ ನಿಗಮದಿಂದ ಅರಿವು ಯೋಜನೆಯಡಿಯಲ್ಲಿ ಮಂಜೂರಾದ ನೀಡುತ್ತಿದ್ದ ಬೋಧನಾ ಶುಲ್ಕದ ವಿವರ | 2021-22ನೇ ಸಾಲಿಗೆ ಅನುಷ್ಠಾನಗೊಳಸಲು ಮಂಜೂರಾತಿ ನೀಡಬೇಕಾದ ಕೋರ್ಸವೈಸ್ ಭೋದನಾ ಶುಲ್ಕ |
|---|---|---|---|
| 1 | ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ (ಸಿ.ಇ.ಟಿ/ನೀಟ್ ಯಿಂದ ಆಯ್ಕೆಯಾದ) ಎಂ.ಬಿ.ಬಿ.ಎಸ್ ಕೊರ್ಸ್‌ಗಳಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ /ಖಾಸಗಿ ಕಾಲೇಜುಗಳಗೆ ಆಯ್ಕೆಯಾದ ವಿದ್ಯಾರ್ಥಿಗಳಗೆ ರಿನ್ಯೂವಲ್ ಭೋದನಾ ಶುಲ್ಕ ಮಾತ್ರ | ಭೋಧನಾ ಶುಲ್ಕದ 50% ಗರಿಷ್ಠ ರೂ.2.00 ಲಕ್ಷದವರೆಗೆ ಬಿಡುಗಡೆ ಮತ್ತು ರಿನ್ಯೂವಲ್ ಪ್ರಕರಣಕ್ಕೆ (3 ಮತ್ತು 4ನೇ ವರ್ಷಕ್ಕೆ) ರೂ.3.00 ಲಕ್ಷಗಳು | ಗರಿಷ್ಠ ರೂ.2.00 ಲಕ್ಷದವರೆಗೆ ಬಿಡುಗಡೆ (ರಿನ್ಯೂವಲ್ ಪ್ರಕರಣಕ್ಕೆ) |

.......2

| | | | |
|---|---|---|---|
| 2 | ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ (ಸಿ.ಇ.ಟಿ/ನೀಟ್) ಬಿ.ಡಿ.ಎಸ್ ಹಾಗೂ ಅಲೈಡ್ ಮೆಡಿಕಲ್ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ರಿನ್ಯೂವಲ್ ಬೋಧನಾ ಶುಲ್ಕ ಮಾತ್ರ. | ಬೋಧನಾ ಶುಲ್ಕದ 50% ಗರಿಷ್ಠ ರೂ.30,000/ (ರಿನ್ಯೂವಲ್ ಸಹಿತ) | ಗರಿಷ್ಠ ರೂ.50,000/-ಗಳು (ರಿನ್ಯೂವಲ್ ಪ್ರಕರಣಕ್ಕೆ ಮಾತ್ರ) |
| 3 | ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ (ಸಿ.ಇ.ಟಿ/ನೀಟ್) ಯಿಂದ ಅಂದರೆ ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್, ಇಂಜಿನಿಯರಿಂಗ್ ಟೆಕ್ನಾಲಜಿ (ಬಿ.ಇ/ಬಿ.ಟೆಕ್), ಅಲೈಡ್ ಮೆಡಿಕಲ್ಸ್ ಕೋರ್ಸ್‌ಗಳಿಗೆ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ | ಬೋಧನಾ ಶುಲ್ಕದ 50% ಗರಿಷ್ಠ ರು.30,000/- (ರಿನ್ಯೂವಲ್ ಸಹಿತ) | ಗರಿಷ್ಠ ರೂ.50,000/-ಗಳು (ರಿನ್ಯೂವಲ್ ಪ್ರಕರಣಕ್ಕೆ ಮಾತ್ರ) |

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: <u>MWD 61 MDC 2021,</u>**
**<u>ಬೆಂಗಳೂರು, ದಿನಾಂಕ:14-09-2021.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: MWD 61 MDC 2021, ದಿನಾಂಕ:18-08-2021 ರಂದು ಹೊರಡಿಸಿದ್ದ ಆದೇಶವನ್ನು ಹಿಂಪಡೆಯಲಾಗಿದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2021-22 ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಡಿತಗೊಳಿಸಿ ನಿಗದಿಪಡಿಸಿರುವುದರಿಂದ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಂಡಿರುವ ಅರಿವು (ARIVU) ವಿದ್ಯಾಭ್ಯಾಸ ಸಾಲ ಯೋಜನೆಯನ್ನು ಪ್ರಸಕ್ತ ಸಾಲಿನಿಂದ ಅನ್ವಯವಾಗುವಂತೆ ಬೋಧನ ಶುಲ್ಕವನ್ನು ಈ ಕೆಳಕಂಡಂತೆ ಷರತ್ತಿಗೊಳಪಟ್ಟು ನಿಗದಿಪಡಿಸಿ ಸರ್ಕಾರವು ಅನುಮೋದನೆ ನೀಡಿ ಆದೇಶಿಸಿದೆ.

| ಕ್ರ.ಸಂ | ವಿದ್ಯಾಭ್ಯಾಸ/ಕೋರ್ಸ್‌ಗಳು ಮತ್ತು ವಿವರಣೆ | ಈ ಹಿಂದೆ ನಿಗಮದಿಂದ ಅರಿವು ಯೋಜನೆಯಡಿಯಲ್ಲಿ ಮಂಜೂರಾದ ನೀಡುತ್ತಿದ್ದ ಬೋಧನಾ ಶುಲ್ಕದ ವಿವರ | 2021-22ನೇ ಸಾಲಿಗೆ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಬೇಕಾದ ಕೋರ್ಸ್‌ವೈಸ್ ಬೋಧನಾ ಶುಲ್ಕ |
|---|---|---|---|
| 1 | ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ (ಸಿ.ಇ.ಟಿ/ನೀಟ್ ಯಿಂದ ಆಯ್ಕೆಯಾದ) ಎಂ.ಬಿ.ಬಿ.ಎಸ್ ಕೋಸ್‌ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ /ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ರಿನ್ಯೂವಲ್ ಬೋಧನಾ ಶುಲ್ಕ ಮಾತ್ರ | ಬೋಧನಾ ಶುಲ್ಕದ 50% ಗರಿಷ್ಠ ರೂ.2.00 ಲಕ್ಷದವರೆಗೆ ಬಿಡುಗಡೆ ಮತ್ತು ರಿನ್ಯೂವಲ್ ಪ್ರಕರಣಕ್ಕೆ (3 ಮತ್ತು 4ನೇ ವರ್ಷಕ್ಕೆ) ರೂ.3.00 ಲಕ್ಷಗಳು | ಗರಿಷ್ಠ ರೂ.2.00 ಲಕ್ಷದವರೆಗೆ ಬಿಡುಗಡೆ (ರಿನ್ಯೂವಲ್ ಪ್ರಕರಣಕ್ಕೆ) |

......3

| | | | |
|---|---|---|---|
| 2 | ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ (ಸಿ.ಇ.ಟಿ/ನೀಟ್) ಬಿ.ಡಿ.ಎಸ್ ಹಾಗೂ ಅಲೈಡ್ ಮೆಡಿಕಲ್ ಕೋರ್ಸಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ರಿನ್ಯೂವಲ್ ಬೋಧನಾ ಶುಲ್ಕ ಮಾತ್ರ. | ಬೋಧನಾ ಶುಲ್ಕದ 50% ಗರಿಷ್ಠ ರೂ.30,000/ (ರಿನ್ಯೂವಲ್ ಸಹಿತ) | ಗರಿಷ್ಠ ರೂ.50,000/-ಗಳು (ರಿನ್ಯೂವಲ್ ಪ್ರಕರಣಕ್ಕೆ ಮಾತ್ರ) |
| 3 | ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ (ಸಿ.ಇ.ಟಿ/ನೀಟ್) ಯಿಂದ ಅಂದರೆ ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್, ಇಂಜಿನಿಯರಿಂಗ್ ಟೆಕ್ನಾಲಜಿ (ಬಿ.ಇ/ಬಿ.ಟೆಕ್). ಅಲೈಡ್ ಮೆಡಿಕಲ್ಸ್ ಕೋರ್ಸ್‌ಗಳಿಗೆ ಸರ್ಕಾರಿ/ಖಾಸಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ | ಬೋಧನಾ ಶುಲ್ಕದ 50% ಗರಿಷ್ಠ ರು.30,000/- (ರಿನ್ಯೂವಲ್ ಸಹಿತ) | ಗರಿಷ್ಠ ರೂ.50,000/-ಗಳು (ರಿನ್ಯೂವಲ್ ಪ್ರಕರಣಕ್ಕೆ ಮಾತ್ರ) |

**ಷರತ್ತುಗಳು:-**

1. ವಿದ್ಯಾರ್ಥಿಗಳಿಂದ ಯಾವುದೇ Off line /online ಮೂಲಕ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸರ್ಕಾರಿ ಕೋಟಾದಡಿ ಆಯ್ಕೆಯಾದ ವೃತ್ತಿಪರ (ಪ್ರೋಫೆಶನಲ್) ಕೋರ್ಸ್‌ಗಳಿಗೆ ಮಾತ್ರ ಸಾಲ ಸೌಲಭ್ಯವು ಅನ್ವಯಿಸುತ್ತದೆ. ಇದಕ್ಕಾಗಿ ಕೂಡಲೇ ಲೋನ್ ಸಾಫ್ಟ್‌ವೇರ್‌ನ ಮೂಲಕ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.
3. ನಿಗಮವು ಸಂಬಂಧಪಟ್ಟ ಕಾಲೇಜುಗಳಿಂದ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಆನ್‌ಲೈನ್ ತಂತ್ರಾಂಶದ ಮೂಲಕ ಪಡೆಯತಕ್ಕದ್ದು. ಇದಕ್ಕಾಗಿ ಲೋನ್ ತಂತ್ರಾಂಶದ ಮೂಲಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ರಮವಹಿಸುವುದು.
4. ವಿದ್ಯಾರ್ಥಿಗಳನ್ನು ಸಾಲಸೌಲಭ್ಯಕ್ಕೆ ಆಯ್ಕೆ ಮಾಡಲು ವಾರ್ಷಿಕ ಆದಾಯ ಕನಿಷ್ಠ ಮಿತಿಯಿಂದ ಆದ್ಯತೆಯ ಮೇಲೆ ಪರಿಗಣಿಸತಕ್ಕದ್ದು.
5. ವಿದ್ಯಾರ್ಥಿಯು II-B ಪ್ರವರ್ಗಕ್ಕೆ ಸೇರಿರುವ ಬಗ್ಗೆ ತಹಶೀಲ್ದಾರ್ ರವರಿಂದ ಜಾತಿ/ಆದಾಯ ದೃಢೀಕೃತ ಪತ್ರ ಹೊಂದಿರುವುದನ್ನು ಸಂಸ್ಥೆ/ಕಾಲೇಜುಗಳು ಖಾತರಿಪಡಿಸಿಕೊಳ್ಳತಕ್ಕದ್ದು. (ಆದಾಯದ ಮಿತಿ ರೂ.8.00 ಲಕ್ಷಕ್ಕಿಂತ ಮೀರಿರಬಾರದು.) ವಿದ್ಯಾರ್ಥಿಯು ನಿಗಮದ ಸಾಲ ಸೌಲಭ್ಯ ಪಡೆಯಲು ಅರ್ಹತೆಯ ಬಗ್ಗೆ ಸದರಿ ಕಾಲೇಜು /ಸಂಸ್ಥೆ ಹೊಣೆಗಾರರಾಗುವುದು.

......4

6. ವಿದ್ಯಾರ್ಥಿಗಳಿಗೆ ನಿಗಮದಿಂದ ಕಾಲೇಜಿನ ಬ್ಯಾಂಕ್ ಖಾತೆಗೆ DBT ಮೂಲಕ ಮಂಜೂರಾದ ಬೋಧನ ಶುಲ್ಕವನ್ನು ನೇರವಾಗಿ ವರ್ಗಾಯಿಸಲಾಗುವುದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ:05-04-2021 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

H. R. 14/9/2021
(ಮುಕ್ತಾರ್ ಪಾಷ ಹೆಚ್.ಜಿ.)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ.

ಗೆ:

1) ಮಹಾಲೇಖಪಾಲರು, (ಅ & ಇ) ಕರ್ನಾಟಕ, ಬೆಂಗಳೂರು, .
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
3) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ), ವಿಧಾನ ಸೌಧ, ಬೆಂಗಳೂರು
4) ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5) ನಿಬಂಧಕರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, ಬೆಂಗಳೂರು.
6) ನಿರ್ದೇಶಕರು, ಆಯುಷ್ ಇಲಾಖೆ, ಆನಂದ ರಾವ್ ವೃತ್ತ, ಬೆಂಗಳೂರು.
7) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.
8) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ವಿ.ವಿ.ಗೋಪುರ, ಬೆಂಗಳೂರು.
9) ಸಂಬಂಧಪಟ್ಟ ಎಲ್ಲಾ ವಿಶ್ವವಿದ್ಯಾಲಯಗಳು. **(ಕೆ.ಎಂ.ಡಿ.ಸಿ. ಮುಖಾಂತರ)**
10) ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

~~~~~~~***~~~~~~~
~~~~~~~